# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 733 |
| ಸದಸ್ಯರ ಹೆಸರು | : | ಶ್ರೀ ಶಶೀಲ್ ಜಿ ನಮೋಶಿ |
| ಉತ್ತರಿಸುವ ದಿನಾಂಕ | : | 22/02/2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳು: 5,953.<br>(ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಒದಗಿಸಿದೆ) |
| (ಆ) | ರಾಜ್ಯದಲ್ಲಿ ಯಾವ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಪರಿವರ್ತಿಸಲು ಕ್ರಮವಹಿಸಲಾಗಿದೆ; ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಬಾಕಿ ಇರುವ ಗ್ರಾಮ ಪಂಚಾಯಿತಿಗಳು ಎಷ್ಟು; (ಸಂಪೂರ್ಣ ವಿವರ ನೀಡುವುದು) | ಈ ಕೆಳಕಂಡ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯತಿಗಳನ್ನಾಗಿ ಮೇಲ್ದರ್ಜೆಗೇರಿಸಲು ಪ್ರಸ್ತಾವನೆಗಳು ಇರುತ್ತವೆ:<br>1. ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಕಮಲನಗರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸ್ವೀಕೃತವಾಗಿರುವ ಪ್ರಸ್ತಾವನೆಯನ್ನು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ನಿಯಮ-3, 4, 9, 349 ಮತ್ತು 355 ರನ್ವಯ ಪರಿಶೀಲಿಸಲಾಗುತ್ತಿದೆ.<br>2. ಹಾಸನ ಜಿಲ್ಲೆ ಅರಸೀಕೇರೆ ತಾಲ್ಲೂಕಿನ ಬಾಣಾವಾರ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಸ್ವೀಕೃತವಾಗಿರುವ ಪ್ರಸ್ತಾವನೆಯನ್ನು ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರ ನಿಯಮ-3, 4, 9, 349 ಮತ್ತು 355 ರನ್ವಯ ಪರಿಶೀಲಿಸುತ್ತಿದ್ದು, ಕೆಲವು ಮಾಹಿತಿ ಒದಗಿಸಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರನ್ನು ಕೋರಲಾಗಿದೆ.<br><br>ಸರ್ಕಾರದ ನಿರ್ದೇಶಾನುಸಾರ ಈ ಕೆಳಕಂಡ ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳನ್ನಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಸಲ್ಲಿಸುವಂತೆ ಪೌರಾಡಳಿತ |

| | | |
|---|---|---|
| | | ನಿರ್ದೇಶನಾಲಯದಿಂದ ಸಂಬಂಧಿಸಿದ ಜಿಲ್ಲಾಧಿಕಾ[illegible]ಗೆ ಪತ್ರ ಬರೆಯಲಾಗಿರುತ್ತದೆ:<br>1. ಬಾಗಲಕೋಟೆ ಜಿಲ್ಲೆಯ ಇಳಕಲ್ಲ ತಾಲ್ಲೂಕಿನ ಗೂಡೂರು ಎಸ್.ಸಿ ಗ್ರಾಮ ಪಂಚಾಯಿತಿ<br>2. ಯಾದಗಿರಿ ಜಿಲ್ಲೆಯ ವಡಗೇರಾ ತಾಲ್ಲೂಕಿನ ವಡಗೇರಾ ಗ್ರಾಮ ಪಂಚಾಯಿತಿ<br>3. ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಮತ್ತು ಚನ್ನೇನಹಳ್ಳಿ ಗ್ರಾಮ ಪಂಚಾಯಿತಿಗಳು.<br><br>ಪೌರಾಡಳಿತ ನಿರ್ದೇಶನಾಲಯದಿಂದ ಅರ್ಹ ಪ್ರಸ್ತಾವನೆಗಳು ಸ್ವೀಕೃತವಾದ ನಂತರ ಕರ್ನಾಟಕ ಪುರಸಭೆಗಳ ಅಧಿನಿಯಮ 1964 ರನ್ವಯ ಪರಿಶೀಲಿಸಿ ಕ್ರಮವಹಿಸಲಾಗುತ್ತದೆ. |

ಸಂಖ್ಯೆ: ನಅಇ 10 ಎಲ್‌ಸಿಕ್ಯೂ 2022

(ಎನ್. ನಾಗರಾಜು ಎಂ ಟಿ ಬಿ)
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು.

ರಾಜ್ಯದ ಗ್ರಾಮ ಪಂಚಾಯತಿಗಳ ಜಿಲ್ಲಾವಾರು ವಿವರ ಅನುಬಂಧ

| ಕ್ರಮ ಸಂಖ್ಯೆ | ಜಿಲ್ಲೆಗಳು | ಒಟ್ಟು ಗ್ರಾ.ಪಂ.ಗಳ ಸಂಖ್ಯೆ |
|---|---|---|
| 1 | ಬಾಗಲಕೋಟ | 196 |
| 2 | ಬಳ್ಳಾರಿ | 100 |
| 3 | ಬೆಳಗಾವಿ | 498 |
| 4 | ಬೆಂಗಳೂರು ನಗರ | 86 |
| 5 | ಬೆಂಗಳೂರು ಗ್ರಾಮಾಂತರ | 101 |
| 6 | ಬೀದರ್ | 185 |
| 7 | ಚಾಮರಾಜನಗರ | 130 |
| 8 | ಚಿಕ್ಕಬಳ್ಳಾಪುರ | 157 |
| 9 | ಚಿಕ್ಕಮಗಳೂರು | 226 |
| 10 | ಚಿತ್ರದುರ್ಗ | 189 |
| 11 | ದಕ್ಷಿಣ ಕನ್ನಡ | 223 |
| 12 | ದಾವಣಗೆರೆ | 195 |
| 13 | ಧಾರವಾಡ | 144 |
| 14 | ಗದಗ | 122 |
| 15 | ಹಾಸನ | 267 |
| 16 | ಹಾವೇರಿ | 223 |
| 17 | ಕಲಬುರಗಿ | 261 |
| 18 | ಕೊಡಗು | 104 |
| 19 | ಕೋಲಾರ | 154 |
| 20 | ಕೊಪ್ಪಳ | 152 |
| 21 | ಮಂಡ್ಯ | 233 |
| 22 | ಮೈಸೂರು | 257 |
| 23 | ರಾಯಚೂರು | 178 |
| 24 | ರಾಮನಗರ | 126 |
| 25 | ಶಿವಮೊಗ್ಗ | 262 |
| 26 | ತುಮಕೂರು | 330 |
| 27 | ಉಡುಪಿ | 155 |
| 28 | ಉತ್ತರಕನ್ನಡ | 229 |
| 29 | ವಿಜಯಪುರ | 211 |
| 30 | ಯಾದಗಿರಿ | 122 |
| 31 | ವಿಜಯನಗರ | 137 |
| | **ಒಟ್ಟು** | **5953** |